

ಹುಡುಗ: ಸಾರ್ ಪೇಪರ್ ತಗೊಳ್ಳಿ. ಬಿಸಿ ಬಿಸಿ ಸುದ್ದಿ ಇದೆ
ಗುಂಡ: ಬೇಡಪ್ಪಾ ಹೋಗು.
ಹುಡುಗ: ಯಾಕೆ ಸಾರ್ ಬೇಡಾಂತೀರಾ?
ಗುಂಡ: ಬಿಸಿ ಬಿಸಿ ಸುದ್ದಿ ಅಂತೀಯಾ. ಕೈ ಸುಟ್ಟು ಹೋದರೆ ಗತಿಯೇನು?

ಟೀಚರ್: ಕೀಟಗಳ ಕಚ್ಚುವಿಕೆಯಿಂದ ರೋಗ ಹರಡುವುದನ್ನು ತಡೆಯಲು ಸಾಧ್ಯವೇ?
ಗುಂಡ: ಖಂಡಿತಾ ಸಾಧ್ಯ.
ಟೀಚರ್: ಅದು ಹೇಗೆ?
ಗುಂಡ: ನಾವು ಬೇರೆಯವರನ್ನು ಕಚ್ಚದಿದ್ರೆ ಆಯಿತು ಅಷ್ಟೆ!

ರಮೇಶ: ವಿಪರೀತ ಸಮಸ್ಯೆ ಆಗಿದೆ. ಡೈವೋರ್ಸ್ ತಗೋಬೇಕಂತ ವಕೀಲರ ಬಳಿ ಹೋಗಿದ್ದೆ.
ಉಮೇಶ: ಹೌದಾ, ಅವರು ಏನ್ ಹೇಳಿದ್ರು?
ರಮೇಶ: ಹೆಂಡತಿ ಹೇಳಿದಂತೆ ಕೇಳಿದ್ರೆ ಎಲ್ಲಾ ಸಮಸ್ಯೆಗಳೂ ಇತ್ಯರ್ಥ ಆಗುತ್ತೆ ಅಂತ ಅಂದ್ರು!

(ಸಂಗ್ರಹ) ಎಂ.ಕೆ. ಮಂಜುನಾಥ್, ಸುಂಕದಕಟ್ಟೆ

ಜೈಲರ್: ನಿನ್ನನ್ನು ಗಲ್ಲಿಗೆ ಹಾಕುತ್ತೇವೆ. ನಿನ್ನ ಕೊನೆಯ ಆಸೆ ಏನು?
ಗುಂಡ: ನನ್ನ ಮಕ್ಕಳನ್ನು ನೋಡಬೇಕು.
ಜೈಲರ್: ಆಯ್ತು ಕರೆಸುತ್ತೇವೆ. ಅವರೆಲ್ಲ ಎಲ್ಲಿ?
ಗುಂಡ: ನನಗೆ ಇನ್ನೂ ಮದುವೆನೇ ಆಗಿಲ್ಲ ಸರ್!

★★★

ಡಾಕ್ಟರ್: ನೀವು ಲಂಚ ತಗೊಳ್ತೀರಾ?
ಗುಂಡ: ಅಷ್ಟು ಸರಿಯಾಗಿ ಹೇಗೆ ಹೇಳಿದಿರಿ?
ಡಾಕ್ಟರ್: ನಾಲಿಗೆ ಮುಂದಕ್ಕೆ ಚಾಚಿ ಅಂದರೆ ನೀವು ಕೈಯನ್ನು ಮುಂದಕ್ಕೆ ಚಾಚುತ್ತಿದ್ದೀರಲ್ಲ.

★★★

ತಿಮ್ಮ: ತಡವಾಗಿ ಮದುವೆ ಆಗುವುದು ಒಳ್ಳೆಯದೆ.
ಗುಂಡ: ಹಾಗೆ ಯಾಕೆ ಹೇಳ್ತಿದ್ದೀಯಾ?
ತಿಮ್ಮ: ಒಳ್ಳೆಯವಳು ಸಿಕ್ಕರೆ ಇಷ್ಟು ದಿನ ಕಾದಿದ್ದು ಸಾರ್ಥಕವಾಯಿತು ಎನ್ನಬಹುದು. ಕೆಟ್ಟವಳು ಸಿಕ್ಕರೆ ಇಷ್ಟು ದಿನವಾದರೂ ನೆಮ್ಮದಿಯಾಗಿದ್ದೆ ಎನ್ನಬಹುದು.

★★★

ತಿಮ್ಮ: ಎರಡು ನೂರು ರೂಪಾಯಿ ಕೊಟ್ಟು ಮೂರು ಶರ್ಟ್ ಕೊಂಡರೆ ಬಕೆಟ್ ಫ್ರೀ ಅಂದ್ರಲ್ಲ ಎಲ್ಲಿ?
ಗುಂಡ: ಈ ಶರ್ಟ್‌ಗಳನ್ನು ತಗೊಂಡು ಹೋಗಿ ನಿಮ್ಮ ಹೆಂಡತಿಯ ಕೈಗೆ ಕೊಡಿ. ಅವರು ಇದನ್ನು ಪಾತ್ರೆಯವನಿಗೆ ಕೊಟ್ಟು ಬಕೆಟ್ ತಗೊಳ್ತಾರೆ.

★★★

ಬಾಸ್: ಮದುವೆಗೆ ಮುಂಚೆ ಏನು ಮಾಡ್ತಿದ್ದೆ?
ಗುಂಡ: ಮದುವೆಗೆ ಮುಂಚೆ ನನಗೆ ತಿಳಿದದ್ದು ಬೇಕಾದ್ದು ಮಾಡ್ತಿದ್ದೆ ಸರ್.

★★★

ಡಾಕ್ಟರ್: ಮೈ ಮರೆತು ನಿದ್ದೆ ಮಾಡುವುದು ಆರೋಗ್ಯಕ್ಕೆ ಒಳ್ಳೆಯದು.
ಗುಂಡ: ಇದನ್ನು ನಮ್ಮ ಪಕ್ಕದ ಮನೆಯವರಿಗೂ ಹೇಳಿ. ಅವರು ಯಾವಾಗಲೂ ಜಗಳ ಆಡ್ತಿರ್ತಾರೆ.

★★★

ತಿಮ್ಮ: ಒಂದು ಸಾವಿರ ಕೇಜಿಗಳು ಎಂದರೆ ಒಂದು ಟನ್. ಹಾಗಾದರೆ ಮೂರು ಸಾವಿರ ಟನ್‌ಗಳು ಎಂದರೆ ಎಷ್ಟು?
ಗುಂಡ: ಟನ್ ಟನ್ ಟನ್.

★★★

ಶಿಕ್ಷಕ: ಮಹಾಕವಿ ಕಾಳಿದಾಸ ಮಾಲವಿಕಾಗ್ನಿ ಮಿತ್ರ ಮಹಾಕಾವ್ಯ ಬರೆದಿದ್ದೇಕೆ?
ಗುಂಡ: ಏಕೆಂದರೆ ಆಗಿನ ಕಾಲದಲ್ಲಿ ಪ್ರಿಂಟಿಂಗ್ ಪ್ರೆಸ್ ಇರಲಿಲ್ಲ ಸರ್.

■ ಭೋಜರಾಜ ಸೊಪ್ಪಿಮಠ


ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.